# ಸರ್ಕಾರಿ ಪ್ರೌಢಶಾಲೆ ಬೇಗೂರು ಬೆಂಗಳೂರು-೬೮

## ೯ ನೇ ತರಗತಿ ಪ್ರಥಮಭಾಷೆ ಕನ್ನಡ ನೈದಾನಿಕ ಪರೀಕ್ಷೆ ೨೦೧೬-೧೭

೧.ಕೆಳಗೆ ಕೊಟ್ಟಿರುವ ಪದಗಳಲ್ಲಿ ಹೃಸ್ವಸ್ವರದಿಂದ ಮತ್ತು ದೀರ್ಘಸ್ವರದಿಂದ ಪ್ರಾರಂಭವಾಗುವ ಪದಗಳನ್ನುಪ್ರತ್ಯೇಕಿಸಿ ಬರೆಯಿರಿ.

ಆಯಾಸ, ಋಗ್ವೇದ ,ಊರುಭಂಗ ,ಏರು, ಉಪವಾಸ ಅಧ್ಯಯನ

೨.ಕೆಳಗಿನ ಶಬ್ದಗಳನ್ನು ಗುಣಿತಾಕ್ಷರಗಳ ವಿಭಜನಾ ಕ್ರಮದಲ್ಲಿ ಬರೆಯಿರಿ.

ಜೀವಜಾಲ, ಸಹವಾಸ, ಗೆಳೆತನ ,ಕೃಷಿ

೩.ಕೆಳಗೆ ಕೊಟ್ಟಿರುವ ಶಬ್ದಗಳಲ್ಲಿರುವ ಸಜಾತೀಯ ಸಂಯುಕ್ತಾಕ್ಷರದ ಕೆಳಗೆ ಗೆರೆಯನ್ನೂ,ವಿಜಾತೀಯ ಸಂಯುಕ್ತಾಕ್ಷರಕ್ಕೆ ವೃತ್ತವನ್ನೂ ಹಾಕಿರಿ.

ವಿನ್ಯಾಸ, ಅದ್ಭುತ ,ಅನ್ನಪ್ರಾಶನ , ಇತ್ಯಾದಿ ,ವಿಷ್ಣುವರ್ಧನ ,ಕಪ್ಪುಮಣ್ಣು

೪. ಕೆಳಗಿನ ಪದಗಳಲ್ಲಿರುವ ವಿಭಕ್ತಿ ಪ್ರತ್ಯಯವನ್ನು ಬಿಡಿಸಿ ಬರೆಯಿರಿ.

ಉದಾ: ಮನೆಯನ್ನು : ಮನೆ+ ಅನ್ನು

ಶಾಲೆಯಲ್ಲಿ , ದೇವರಿಗೆ ,ಸುಂದರಿಯು , ರಾವಣನ

೫.ಕೆಳಗೆ ಕೊಟ್ಟಿರುವ ವಾಕ್ಯಗಳಲ್ಲಿರುವ ನಾಮಪದ ಮತ್ತು ಸರ್ವನಾಮ ಪದವನ್ನು ಗುರುತಿಸಿ ಬರೆಯಿರಿ.

ರಾಮನು ಕರೆದಿದ್ದರಿಂದಲೇ ನಾನು ಬರಬೇಕಾಯಿತು.

ಅವರು ಶಿಕ್ಷಕರ ಮಾತಿಗೆ ಎಂದೂ ಎದುರಾಡುವುದಿಲ್ಲ.

೬.ಕೊಟ್ಟಿರುವ ವಾಕ್ಯದಲ್ಲಿರುವ ಕರ್ತೃ,ಕರ್ಮ,ಕ್ರಿಯಾಪದ ಗುರುತಿಸಿ ಬರೆಯಿರಿ.

ಸಹನಾ ಲೇಖನವನ್ನು ಓದಿದಳು.

ಮಕ್ಕಳು ಆಟವನ್ನು ಆಡಿದರು.

೭. ಕೆಳಗಿನ ಪದಗಳನ್ನು ವಿಗ್ರಹಿಸಿ ಸಂಧಿ ಹೆಸರಿಸಿ .

ಇನ್ನೊಂದು , ಹುಲಿದೊಗಲು, ಗುರುವನ್ನು ,ವಿದ್ಯಾಭ್ಯಾಸ

೮.ಸಮಾಸ ಪದ ವಿಗ್ರಹಿಸಿ ಬರೆಯಿರಿ.

ಅರಮನೆ ಹೆದ್ದಾರಿ

ದಿವ್ಯಪ್ರಕಾಶ ಮೂಜಗ

**mamatabhagwat1@gmail.com**

೯. ಗಾದೆ ಮಾತನ್ನು ಪೂರ್ಣಗೊಳಿಸಿ .
ಚಿಂತೆಯೇ ಮುಪ್ಪು;---------------
ದೂರದ ಬೆಟ್ಟ ------------------.
೧೦..ಪದ್ಯದ ಭಾವಾರ್ಥ ಬರೆಯಿರಿ.
ಉಪ್ಪಿಗಿಂತಲು ರುಚಿಯು ತಾಯಿಗಿಂತಲು ಬಂಧು
ಇಲ್ಲೆಂಬ ಗಾದೆ ನುಡಿ ಕೇಳಿರುವೆನು
ಗೆಳೆತನದ ಶುಚಿರುಚಿಯು ಇದಕು ಮಿಗಿಲಾಗಿಹುದು
ಎಂಬ ಸಾಹಸ ಮಾಡೆ ದೋಷವೇನು
ಕಂಡಕಂಡವರೇನು ಬಲ್ಲರಿದನು
ಉಂಡವನು ಕಂಡಿಹನು ಇದರ ಹದನು.

೧೧.. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ ಗಣ, ವಿಭಾಗಿಸಿ ಛಂದಸ್ಸಿನ ಹೆಸರು ಬರೆಯಿರಿ.
ಕಂದಂಗಳ್ ವಾಗ್ವನಿತೆಯ
ಕಂದಂಗಳ್ ಸಭ್ಯ ನವ್ಯ ಕಾವ್ಯಲಸನ್ಮಾ

೧೨. ಕೆಳಗಿನ ಚಿತ್ರವನ್ನು ಗಮನಿಸಿ ಅದರ ಕುರಿತು ನಿಮ್ಮ ಅನಿಸಿಕೆಯನ್ನು ೫ರಿಂದ ಆರು ವಾಕ್ಯಗಳಲ್ಲಿ ಬರೆದು ಬರಹಕ್ಕೊಂದು ತಲೆಬರಹ ನೀಡಿ.



**mamatabhagwat1@gmail.com**